ಜ್ಞಾನ ಜ್ಯೋತಿ
BCU CHRONICLE
# JNANA JYOTHI
ಆಗು ನೀ ಅನಿಕೇತನ
BE BOUNDLESS
BCU NEWS
BCU RADIO
Volume: III Edition: 1 BENGALURU Date: July 25-30, 2022
https://www.bcumcj.com For Private Circulation Only @BCUMCJ

# Students to get more facilities at MCW

## Private sector roped in to boost infrastructure

**Hemanth. M**

**Bengaluru:** Multidisciplinary college for women (MCW) in Malleswaram in Bengaluru will soon overcome teething problems and offer more facilities to students taking admission in the coming academic year.

"Students will get more laboratories and other facilities as soon as possible. The University is trying its best to complete the infrastructure process and some donors have also joined hands in this process", Dr. Jyothi Venkatesh, the Principal of the college, told *BCU Chronicle.*

The college building is still under the construction. Presently the college and classes are functioning from two floors. The college has an office room, principal's chamber, a computer lab and a few classrooms.

It is first college modeled on National Education Policy - 2020 (NEP-2020) and the curriculum is as per the new policy.

"It provides the good learning environment for the students and it is student-friendly," Ms Jyothi, who has been heading the Department of Centre for Global Languages in BCU, added.

She said: "The College offers basic degree and honors degrees in the courses of BA, B.Sc, B.Com and BCA and also provides certificate courses and add-on courses (open elective). The college will enroll 60 students in each subject and students can choose subjects of their choice



**Multi-disciplinary College for Women (MCW) in Malleswaram, Bengaluru.** Hemanth. M



Students will get more laboratories and other facilities as soon as possible. The University is trying its best to complete the infrastructure process and some donors have also joined hands in this process", **Dr. Jyothi Venkatesh**

eventually for a major and minor. The college also offers 11 global languages and bachelors in visual arts with subjects such as animation, graphic designing and sports designing. Students will be given a choice to choose across disciplines and the options can be from any other".

As of now, lectures posts are not created in the college. Therefore, the BCU is employing temporary faculty against the sanctioned posts for its post graduate courses."

MCW focus is to enrich students with knowledge, skills and human values necessary to become ethical, rational individuals.

It also aims to prepare them to be employable. The college mainly focuses on girls' education and is aiming to be the pioneer in woman education in Bengaluru in the years to come.

For now, BCU's internal resources will be used to manage the college and the government has been requested for funds for infrastructure and staff. The college was launched in November 2021. The admission process for the first batch commenced late and there were some initial hurdles. May be due to delay, the response was poor, she felt. Braving the challenges, the management has undertaken several programs to help the

Cont'd-P4

# Make use of medicinal plants, says BCU VC

**Manjuvani. J**

**Bengaluru:** Bengaluru City University Vice Chancellor Prof. Lingaraja Gandhi has called for exploiting the vast knowledge on plant sciences for the human good. Workshop on Conservation Of Native Medicinal Plants At BCU Celebrating 75th year of Indian Independence, Azadi Ka Mrit Mahotsav (AKAM)

"Students should focus on understanding the subject and make use of it to come out with new products," he said while addressing the Workshop on Medicinal Plants at BCU. The Department of Plant Science BCU had organized the workshop in association with Karnataka State Medicinal Plants Authority and Karnataka Biodiversity Board.) held on 13 July, last month at Jana Jyothi Seminar Hall, Bengaluru City University Campus. Besides VC Prof. Lingaraja Gandhi, Shri Sudarshan G.A, IFS. Chief Executive Officer, Karnataka State Medicinal Plants Authority and Smt.Anita S Arekal, IFS. Member Secretory. Karnataka Biodiversity Board addressed the Students and participants in the event. The workshop was organized to create awareness of medicinal plants and also extending the border of medicinal plants available in Karnataka.

Prof Gandhi, who planted a medicinal plant in front of the Jnana Jyothi auditorium. He said "NEP allows our students to engage in the form of seminars, internships and various other programs, it benefits having experimental learning. Students



**BCU Vice Chancellor Lingraja Gandhi at the inaugratation of Conservation of Native Medicinal Plants held in Bengaluru recently.**

will have to do field work and submit the report for assessment", he said. Introducing the medicinal plants in the research field and also promoting healthy life protection of wounds and other disease is also a step taken by the plant science Department. "So many medicines are based on our native plants there is scope for students of botany and plant science", he added. Anita S Arekal IFS, she mentioned some plants and herbs like ginger, tulsi, neem and aloe Vera. Shared about medicinal values and their consumption is beneficial to people. Many of them are used for the Ayurveda and these are considered as home r emedies in many parts of the country. Also biodiversity should be maintained in [food 'water, insects, fish microorganisms.] traditional knowledge of medicinal plants like soaps, cosmetics, lotions, hair oils, Conservation of medicinal plants can be accomplished natural habitat.

# A road which bookworms will never like to miss



**A neatly stacked up used books stall on Avenue Road in Bengaluru** Vinith Kumar. C

**Cirimaya. V**

**Bengaluru:** The famous road, just shouting distance from Bengaluru City University, is a nerve centre as several wholesale traders ply their trade. One can pick up safety pin to the most modern gadgets. Not only that one can get fresh vegetables but also imported fruits. It will be a Herculean task to walk on the one-km long road without brushing anyone during the day time. It starts with State Bank of Mysore (Now SBI) from K G Road and terminates at Krishna Raja Market at the other end.

It is a must-visit place for bookworms and students as one can get rare and out-of-print books. Scores of used book traders ply their trade on the road. Even during the digital age and kindle books period, hundreds of enthusiasts visit the place everyday in search of their favourite books.

The road was once famous for selling new books and used book sellers coexisted with them. With advent of online trade, book sellers are slowly making way for others as they are unable to pay high rent and survive. But old book sellers are still thriving as their overhead costs are almost zero. They sell on push carts, mount temporary racks on building corners. Some of them even encroach footpaths, not minding that they are putting walkers to risk.

Those entering the street from K G Road side will be greeted by used book sellers. Next half a km or so, one would find these book sellers at regular intervals. As the road is undergoing repair (for nearly two years), many have moved into cross streets to run their business. They also compete with others like vegetable and fruit vendors, fancy article sellers and pushcart vendors.

Avenue Road attracts people from all over Karnataka. Online trade is flourishing but used book sellers are still surviving in the 21st century. Book lovers will be able to pick reading material of their choice. One can find some rare books at affordable prices. While other bookstores have a price tag, the book sellers here don't usually have the minimum retail price tag. Generally, there is a hard bargaining between the seller and buyer before the deal is finalised. Many a time, buyers threaten to leave the place in a bid to get books at cheaper rates books. The trick works most of the time. The colour

Cont'd-P4

## ಸಂಪಾದಕೀಯ

# ಶಿಕ್ಷಣ ರಂಗದಲ್ಲಿ ಒಂದು ಹೊಸ ಪರ್ವ

ನಮ್ಮ ಭಾರತದಲ್ಲಿ ಮೊದಲಿಗೆ ಗುರುಕುಲ ಶಿಕ್ಷಣ ಪದ್ಧತಿ ರೂಢಿಯಲ್ಲಿತ್ತು. ಬ್ರಿಟಿಷರು ನಮ್ಮ ದೇಶವನ್ನು ತಮ್ಮ ಆಳ್ವಿಕೆಗೆ ಒಳಪಡಿಸಿಕೊಂಡಾಗಿನಿಂದ ಅವರದೇ ಆದ ಶಿಕ್ಷಣ ಪದ್ಧತಿಯನ್ನು ಜಾರಿಗೆ ತಂದರು. ಅದೇ ಲಾರ್ಡ್ ಮೆಕಾಲೆ ಸೂತ್ರ. ಈ ಮಾದರಿಯನ್ನು ನಮ್ಮ ದೇಶ ಸ್ವಾತಂತ್ರ ಪಡೆಯುವವರೆಗೂ ಈ ನೀತಿ ಮುಂದುವರಿಯಿತು.

ಸ್ವಾತಂತ್ರ್ಯಾನಂತರ ಭಾರತ ಸರ್ಕಾರ ಶಿಕ್ಷಣ ರಂಗದ ಸುಧಾರಣೆಗೆ ಅನೇಕ ಆಯೋಗಗಳನ್ನು ನೇಮಿಸಿತು. 1986ರಲ್ಲಿ ಒಂದು ಹೊಸ ಮೈಲುಗಲ್ಲನ್ನು ಸೃಷ್ಟಿಸಿದ ಅಂದಿನ ಪ್ರಧಾನ ಮಂತ್ರಿ ರಾಜೀವ್‌ಗಾಂಧಿಯವರು ಶಿಕ್ಷಣ ವ್ಯವಸ್ಥೆಯಲ್ಲಿ ಸಮಗ್ರ ಬದಲಾವಣೆಯನ್ನು ತರಲು ನೂತನ ಶಿಕ್ಷಣ ನೀತಿಯನ್ನು ಜಾರಿಗೊಳಿಸಿದರು. ಆ ಶಿಕ್ಷಣ ನೀತಿಯ ಭಾಗವಾಗಿ ನವೋದಯ ಶಾಲೆಗಳು ಪ್ರಾರಂಭವಾದವು.




ತದನಂತರ ಶಿಕ್ಷಣ ವ್ಯವಸ್ಥೆಗೆ ಹೊಸ ಕಾರ್ಯಕಲ್ಪ ನೀಡುವ ಉದ್ದೇಶದಿಂದ ಅದ್ಭುತವಾದ ನರೇಂದ್ರ ಮೋದಿಯವರ ನೇತೃತ್ವದ ಈಗಿನ ಕೇಂದ್ರ ಸರ್ಕಾರವು 35 ವರ್ಷಗಳ ನಂತರ ಒಂದು ಸಮಿತಿಯನ್ನು ರಚಿಸಿದರು. ಈ ಸಮಿತಿಯ ಅಧ್ಯಕ್ಷರಾಗಿ ಮೊದಲ ಕರ್ನಾಟಕದ ಜ್ಞಾನ ಆಯೋಗದ ಅಧ್ಯಕ್ಷರು ಮತ್ತು ಇಸ್ರೋದ ನಿವೃತ್ತ ಅಧ್ಯಕ್ಷರಾದ ಡಾ. ಕೆ. ಕಸ್ತೂರಿ ರಂಗನ್‌ರವರನ್ನು ನೇಮಿಸಲಾಗಿತ್ತು. ಇವರು ಹಾಗೂ ಸಮಿತಿಯ ಎಲ್ಲ ಸದಸ್ಯರು ಸೇರಿ ಒಂದು ವರ್ಷ ಅಧ್ಯಯನ ಮಾಡಿ ಕೇಂದ್ರ ಸರ್ಕಾರಕ್ಕೆ 2020ರಲ್ಲಿ ಒಂದು ವರದಿಯನ್ನು ಸಲ್ಲಿಸಿದರು. ಆಗ ಕೇಂದ್ರ ಸರ್ಕಾರ ಈ ವರದಿಯನ್ನು ಸ್ವೀಕರಿಸಿ ಸಂಸತ್ ಅಧಿವೇಶನದಲ್ಲಿ ಮಂಡಿಸಿ ಅನುಮೋದನೆ ಪಡೆಯಿತು. ಸಮಿತಿಯ ಶಿಫಾರಸ್ಸಿನಂತೆ ಇದೀಗ ರಾಷ್ಟ್ರೀಯ ಶಿಕ್ಷಣ ನೀತಿ–2020 ಎಂಬ ಹೊಸ ನೀತಿಯನ್ನು ಜಾರಿಗೊಳಿಸಲಾಗುತ್ತಿದೆ. ಕೇಂದ್ರ ಸರ್ಕಾರ ಎಲ್ಲಾ ರಾಜ್ಯಗಳಿಗೆ ಈ ವರದಿಯನ್ನು ಕಳುಹಿಸಿದ್ದು ಅದನ್ನು ಅನುಷ್ಠಾನಗೊಳಿಸಲು ಅಗತ್ಯ ಕ್ರಮಗಳನ್ನು ಕೈಗೊಂಡಿದೆ. ಶಿಕ್ಷಣ ವ್ಯವಸ್ಥೆಯು ನಮ್ಮ ಸಂವಿಧಾನದ ಸಮವರ್ತಿ ಪಟ್ಟಿಯಲ್ಲಿ ಬರುತ್ತದೆ. ಇದ–ರಿಂದ ನಮ್ಮ ರಾಜ್ಯ ಸರ್ಕಾರವು 28–08–2021ರಲ್ಲಿ ಹೊಸ ಶಿಕ್ಷಣ ನೀತಿ ಜಾರಿಗೊಳಿಸಲು ಮುಂದಾಗಿದೆ. ಈ ವರದಿಯಲ್ಲಿ ಯಾವ ಮಾದರಿಯ ಶಿಕ್ಷಣ ಅಳವಡಿಸಬೇಕೆಂಬ ಮಾಹಿತಿ ಮತ್ತು ಮಾರ್ಗದರ್ಶನನ್ನು ನೀಡಲಾಗಿದೆ. ಉನ್ನತ ಶಿಕ್ಷಣ ಇಲಾಖೆ ಪ್ರತಿ ವಿಷಯಕ್ಕೆ ಸಂಬಂಧಪಟ್ಟ ನುರಿತ ತಜ್ಞರ ಸಮಿತಿಗಳನ್ನು ರಚಿಸಿದ್ದು ವಿಶ್ವವಿದ್ಯಾಲಯದ ಕುಲಪತಿಗಳು ಅದರ ಅಧ್ಯಕ್ಷರಾಗಿರುತ್ತಾರೆ. ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳೂ ರಾಷ್ಟ್ರೀಯ ಶಿಕ್ಷಣ ನೀತಿಯ ಜಾರಿಯ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿದ್ದು 2022–23ನೇ ಪ್ರಸಕ್ತ ಶೈಕ್ಷಣಿಕ ವರ್ಷದಿದಂಲೇ ಹಂತ ಹಂತವಾಗಿ ಅದನ್ನುಅನುಷ್ಠಾನಗೊಳಿಸಲಾಗುತ್ತಿದೆ.

# ನಗರ ವಿಶ್ವವಿದ್ಯಾಲಯದಲ್ಲಿ ಪದವಿ ಶಿಕ್ಷಣ ಕಲಿಕೆಗೆ ಹೊಸ ಅವಕಾಶ

**ದರ್ಶನ್. ಸಿ**

ಹೊಸ ಶೈಕ್ಷಣಿಕ ವರ್ಷವನ್ನು ಆರಂಭಿಸಲು ಬೆಂಗಳೂರು ನಗರ ವಿವಿ ಸಕಲ ಪೂರ್ವ ಸಿದ್ಧತೆ ಮಾಡಿಕೊಂಡಿದೆ. ಶಿಕ್ಷಣ ರಂಗದಲ್ಲಿ ಹೊಸ ಮೈಲಿಗಲ್ಲು ಸೃಷ್ಟಿಸಲು ರಾಜ್ಯ ಸರ್ಕಾರವು ಈ ಬಾರಿ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಪ್ರತಿ ವಿಶ್ವವಿದ್ಯಾಲಯದಲ್ಲಿ ಅನುಷ್ಠಾನಗೊಳಿಸಬೇಕೆಂದು ಆದೇಶ ಹೊರಡಿಸಿದೆ. ಅದರಂತೆ ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ಪದವಿ ಶಿಕ್ಷಣದ ಕೋರ್ಸ್‌ಗಳನ್ನು ಅಳವಡಿಸಲು ಹೊಸ ಮಾರ್ಗಸೂಚಿಯನ್ನು ರೂಪಿಸಲಾಗಿದೆ.

ಪದವಿ ಶಿಕ್ಷಣಕ್ಕೆ ಮೊದಲ ಆದ್ಯತೆ ನೀಡಬೇಕೆಂದು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಮತ್ತು ಉನ್ನತ ಶಿಕ್ಷಣ ಇಲಾಖೆಯ (ಯುಯುಸಿ–ಎಂಎಸ್) ಎಂಬ ಜಾಲತಾಣದಲ್ಲಿ ಸೂಚಿಸಲಾಗಿದೆ. ಪದವಿ ಪೂರ್ವ ಶಿಕ್ಷಣವನ್ನು ಮುಗಿಸಿರುವ ವಿದ್ಯಾರ್ಥಿಗಳಿಗೆ ಅನುಕೂಲವಾಗಬೇಕೆಂದು ಒಂದೇ ವೆಬ್‌ಸೈಟ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಲು ಅನುವು ಮಾಡಿಕೊಡಲಾಗಿದೆ.

ವಿದ್ಯಾರ್ಥಿಗಳು ತಮಗೆ ಇಷ್ಟವಾದಂತಹ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳುವುದಕ್ಕೆ ಅವಕಾಶ ಕಲ್ಪಿಸಲಾಗಿದೆ.

ಬೆಂಗಳೂರು ನಗರ ವಿಶ್ವವಿದ್ಯಾಲಯದ ಮೂಲಕ ತಮ್ಮ ಪದವಿ ಪಡೆಯಲು ಇಚ್ಛಿಸುವ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಇಲಾಖೆಯ ಮೂಲಕ ಭರ್ತಿ ಮಾಡಿ ವಿಶ್ವವಿದ್ಯಾಲಯದ ಮೊದಲ ಆಯ್ಕೆ ಪಟ್ಟಿಯಲ್ಲಿ ತಮ್ಮ ಹೆಸರನ್ನು ನಿರೀಕ್ಷಿಸುತ್ತಿದ್ದಾರೆ. ಆಗಸ್ಟ್ ಮೊದಲ ವಾರದಲ್ಲಿ ಸಂಪೂರ್ಣವಾಗಿ ಎಲ್ಲಾ ವಿಭಾಗಗಳ ಪಟ್ಟಿಯನ್ನು ಬಿಡುಗಡೆ ಮಾಡಲಾಗುವುದು ಎಂದು ಆಡಳಿತ ಮಂಡಳಿಗಳಿಂದ ತಿಳಿದು ಬಂದಿದೆ. ವಿಶ್ವವಿದ್ಯಾಲಯವು ಪ್ರಸ್ತುತ ಸಾಲಿನಲ್ಲಿ ಆರಂಭಿಸಿರುವ ಕೋರ್ಸ್‌ಗಳು ಈ ಕೆಳಗಿನಂತಿವೆ.

BA- Basic/Honors,
BSW-Basic/Honors,
BSc-Basic/Honors,
BSc-Basic/Honors,
BC:A-Basic/Honors
Bcom-Basic/Honors,
BBA-Basic/Honors,

ಹಾಗೆಯೇ ಭಾಷೆಯ ಕಲಿಕೆಯಲ್ಲೂ ಆಯ್ಕೆ ಇದ್ದು ಕನ್ನಡ, ಇಂಗ್ಲಿಷ್ ,ಫ್ರೆಂಚ್, ಜರ್ಮನ್, ಸಂಸ್ಕೃತ ಮತ್ತು ಹಿಂದಿ ಮುಂತಾದ ಭಾಷೆಗಳನ್ನು ಆಯ್ಕೆ ಮಾಡಿಕೊಳ್ಳುವಂತಹ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಈಗ ಕೆಲವು ಪದವಿ ಕೋರ್ಸ್‌ಗಳ ಪ್ರವೇಶಾತಿ ನಡೆಯುತ್ತಿದ್ದು ಪ್ರವೇಶಾತಿ ಮುಕ್ತಾಯಗೊಂಡ ನಂತರ ವಿದ್ಯಾರ್ಥಿಗಳಿಗೆ ಆಯ್ಕೆ ವಿಭಾಗದ ಅಧ್ಯಯನಕ್ಕಾಗಿ ಕೊಠಡಿಗಳ ಸಮಸ್ಯೆಗಳು ಎದುರಾಗಬಹುದು.



**ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕಟ್ಟಡ** (ಸಂಗ್ರಹ ಚಿತ್ರ)

ವಿಶ್ವವಿದ್ಯಾಲಯದ ಕಟ್ಟಡಗಳ ನವೀಕರಣದ ಪ್ರಕ್ರಿಯೆ ನಡೆಯುತ್ತಿದ್ದು ವಿದ್ಯಾರ್ಥಿಗಳ ಆಗಮನಕ್ಕೆ ಮುನ್ನ ಕಾಮಗಾರಿಯನ್ನು ಪೂರ್ಣಗೊಳಿಸಲಾಗಲಾರದು. ಆದ್ದರಿಂದ ತಾತ್ಕಾಲಿಕ ಕಟ್ಟಡಗಳ ಮೂಲಕ ವಿದ್ಯಾರ್ಥಿಗಳ ಪಾಠಗಳು ನಡೆಯುತ್ತವೆ ಎಂದು ವಿಶ್ವವಿದ್ಯಾಲಯದ ಆಡಳಿತ ಮೂಲಗಳು ತಿಳಿಸಿದೆ.

ಈ ಬಾರಿ ಸಂಪೂರ್ಣವಾಗಿ ಉದ್ಯೋಗ ಕೌಶಲ್ಯ ನುರಿತ ಕೋರ್ಸುಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕೆಂದು ಬಿಸಿಯು ಆಡಳಿತ ವ್ಯವಸ್ಥೆ ಕಲ್ಪಿಸಲಾಗಿದೆ.

ಮೊದಲ ವರ್ಷದಲ್ಲಿ ಪಠ್ಯದ ವಿಷಯಗಳನ್ನು ಓದುವ ವಿದ್ಯಾರ್ಥಿಗಳು ಎರಡು ಮತ್ತು ಮೂರನೇ ವರ್ಷದ ಸಾಲಿನಲ್ಲಿ ಕೈಗಾರಿಕಾ ನಿರತ ಕೋರ್ಸ್‌ಗಳ ಬಗ್ಗೆ ಅಧ್ಯಯನ ಮಾಡಲಿದ್ದಾರೆ ಮತ್ತು ವಿದ್ಯಾರ್ಥಿಗಳು ನಾಲ್ಕು ವರ್ಷಗಳಲ್ಲಿ ಪದವಿಗಳನ್ನು ಮುಗಿಸಲಿದ್ದಾರೆ. ಬಹು ಬೇಡಿಕೆಯ ಕೋರ್ಸ್‌ಗಳಿಗಾಗಿ ಬಹಳ ಜಿದ್ದಾಜಿದ್ದಿ ನಡೆಯುತ್ತಿದೆ,

ಅಂತಹ ಕೋರ್ಸ್‌ಗಳ ಪೈಕಿ ಬಿಸಿಎ ಮತ್ತು ಬಿಎಸ್ಸಿಗೆ ಅತಿ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿದೆ.

ಬಿಸಿಎ ಒಂದು ತಾಂತ್ರಿಕ ಕೋರ್ಸ್ ಆಗಿದ್ದು ಇದಕ್ಕಾಗಿ ಉತ್ತಮ ಗುಣಮಟ್ಟದ ಯಂತ್ರೋಪಕರಣಗಳ ಅವಶ್ಯಕತೆ ಹೆಚ್ಚಾಗಿರುತ್ತದೆ.

ಈ ನಿಟ್ಟಿನಲ್ಲಿ ಎರಡು ವಿನೂತನವಾದ ಸುಸಜ್ಜಿತ ಲ್ಯಾಬ್‌ಗಳ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿವೆ.

ಕೆಲ ಹೊಸ ಕೋರ್ಸ್‌ಗಳಿಗೆ ಶಿಕ್ಷಕರ ನೇಮಕಾತಿ ಆಗಬೇಕಿದೆ. ಇದರಿಂದ ಡಾಕ್ಟರೇಟ್ ಪದವಿ ಪಡೆದ ನುರಿತ ವಿಷಯ ತಜ್ಞರಿಗೆ ಹೆಚ್ಚಿನ ಆದ್ಯತೆ ನೀಡಬೇಕೆಂದು ವಿಶ್ವವಿದ್ಯಾಲಯ ಧನಸಹಾಯ ಆಯೋಗ ಸೂಚಿಸಿದೆ.

ಗುಣಮಟ್ಟದ ವಿದ್ಯಾಭ್ಯಾಸ ನೀಡಬೇಕೆಂದು ಆಯಾ ವಿಷಯದಲ್ಲಿ ಪ್ರಾವೀಣ್ಯತೆ ಹೊಂದಿರುವ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳಲು ನಿರ್ಧರಿಸಲಾಗಿದ್ದು ವಿದ್ಯಾರ್ಥಿಗಳು ಆಗಮನಕ್ಕೆ ಮುಂಚಿತವಾಗಿ ಅದು ನೆರವೇರಲಿದೆ ಎಂದು ವಿಶ್ವವಿದ್ಯಾಲಯದ ಆಡಳಿತ ಮೂಲಗಳಿಂದ ತಿಳಿದು ಬಂದಿದೆ.

# ಫ್ರೀಡಂ ಪಾರ್ಕ್ ಬಳಿ ಬಹು ಅಂತಸ್ತಿನ ಪಾರ್ಕಿಂಗ್ ಕಟ್ಟಡ ನಿರ್ಮಾಣ

**ದಾದಪೀರ್. ಜಿ. ಎನ್**

ಬೆಂಗಳೂರಿನ ಹೃದಯ ಭಾಗದಲ್ಲಿರುವ ಫ್ರೀಡಂ ಪಾರ್ಕ್ ಹತ್ತಿರ ಪಾರ್ಕಿಂಗ್ ಮತ್ತು ಪ್ರತಿಭಟನೆ ಮಾಡುವವರಿಗೆ ಬಹಳ ಅನುಕೂಲವಾಗುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು 79 ಕೋಟಿ ರೂ ವೆಚ್ಚದಲ್ಲಿ ಬಹುಮಹಡಿ ಪಾರ್ಕಿಂಗ್ ಕಟ್ಟಡವನ್ನು ನಿರ್ಮಿಸಲಾಗುತ್ತಿದೆ. ಈ ಯೋಜನೆಯನ್ನು ಬಿಬಿಎಂಪಿಯು 2015ರಲ್ಲಿ ಖಾಸಗಿ ಕಂಪನಿಗೆ ಟೆಂಡರ್ ಮೂಲಕ ಕೊಡಲಾಗಿತ್ತು. ಈ ಕಂಪನಿಯು 2017 ರಿಂದ ಕಾಮಗಾರಿಯನ್ನು ಪ್ರಾರಂಭಮಾಡಿತು. ಕೆಳಮಹಡಿಯಲ್ಲಿ ಮೂರು ಹಂತಗಳನ್ನು ಅಂದರೆ (–1–2–3) ನಿರ್ಮಿಸಲಾಗಿದ್ದು 556 ಕಾರುಗಳು ಮತ್ತು 445 ದ್ವಿಚಕ್ರ ವಾಹನಗಳನ್ನು ಇಲ್ಲಿ ಪಾರ್ಕಿಂಗ್ ಮಾಡಬಹುದಾಗಿದೆ. ಮೇಲಿನ ಮಹಡಿಯಲ್ಲಿ ಷೆಡ್ ನಿರ್ಮಿಸಲಾಗಿದ್ದು ಅಲ್ಲಿ ಸಾರ್ವಜನಿಕರಿಗೆ ಪ್ರತಿಭಟನೆ ಮಾಡಲು ಅವಕಾಶವನ್ನು ಕಲ್ಪಿಸಲಾಗಿದೆ. ಟೆರೇಸ್‌ನಲ್ಲಿ ಸೋಲಾರ್ ಪ್ಯಾನೆಲ್ ಸಹ ಅಳವಡಿಸಲಾಗಿದೆ ಅಗ್ನಿಶಾಮಕ ಉಪಕರಣಗಳು ಮತ್ತು ನಾಲ್ಕು ಲಿಫ್ಟ್ ಗಳು ವ್ಯವಸ್ಥೆ ಮಾಡಲಾಗಿದೆ. ಈ ವೇಳೆಗೆ ಕಾಮಗಾರಿಯು ಸಂಪೂರ್ಣವಾಗಿ ಮುಗಿಯಬೇಕಿತ್ತು. ಆದರೆ ಕಾಮಗಾರಿ ಸ್ಥಳದಲ್ಲಿ ದೊಡ್ಡ ಗಾತ್ರದ ಕಲ್ಲಿನ ಬಂಡೆ ದೊರೆತ ಕಾರಣ ಕೆಲ ದಿನಗಳ ಕಾಲ ಕಾಮಗಾರಿಯನ್ನು ನಿಲ್ಲಿಸಲಾಗಿತ್ತು.

ಹಾಗಾಗಿ ನಿರ್ಮಾಣ ಕಾರ್ಯ ವಿಳಂಬವಾಯಿತು. ಇತ್ತೀಚೆಗೆ ಗಾಂಧಿನಗರದ ಶಾಸಕ ದಿನೇಶ್ ಗುಂಡೂರಾವ್ ಮತ್ತು ಬಿಬಿಎಂಪಿಯ ಮುಖ್ಯ ಆಯುಕ್ತರಾಗಿದ್ದ ಗೌರವ್ ಗುಪ್ತಾ ಸ್ಥಳಕ್ಕೆ ಭೇಟಿ ನೀಡಿದ್ದರು. ಈ ಕಟ್ಟಡ ಸಂಪೂರ್ಣವಾಗಿ ನಿರ್ಮಾಣವಾದ ನಂತರ ಗಾಂಧಿನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಾಹನಗಳ ಪಾರ್ಕಿಂಗ್‌ಗಾಗಿ ಸಾರ್ವಜನಿಕರು ಪರದಾಡುವುದು ತಪ್ಪುತ್ತದೆ. ಅಲ್ಲದೆ ಎಲ್ಲೆಂದರಲ್ಲಿ ವಾಹನಗಳನ್ನು ನಿಲ್ಲಿಸುವುದು ತಪ್ಪುತ್ತದೆ. ಪೊಲೀಸರು ಟೋಯಿಂಗ್ ಮೂಲಕ ವಾಹನವನ್ನು ಎತ್ತಿಕೊಂಡು ಹೋಗಬಹುದೆನ್ನುವ ಚಿಂತೆಯೂ ದೂರವಾಗಲಿದೆ. ವಾಹನಗಳ ಕಳ್ಳತನ ಮತ್ತು ಹಾನಿಯಾಗುವುದು ಕಡಿಮೆಯಾಗುತ್ತದೆ. ಈ ಬಹು ನಿರೀಕ್ಷಿತ ಮಲ್ಟಿ ಲೆವೆಲ್ ಕಟ್ಟಡವು ಬಿಬಿಎಂಪಿ ಇಂಜಿನಿಯರ್ ಲೋಕೇಶ್‌ರವರ ಪ್ರಕಾರ ಸೆಪ್ಟೆಂಬರ್ ಅಥವಾ ಅಕ್ಟೋಬರ್ ತಿಂಗಳೊಳಗೆ ಸಾರ್ವಜನಿಕರ ಬಳಕೆಗೆ ಲಭ್ಯವಾಗಬಹುದೆಂದು ತಿಳಿಸಿದ್ದಾರೆ.

# ಪತ್ರಿಕೋದ್ಯಮ ವಿದ್ಯಾರ್ಥಿಗಳಿಂದ ವಿಧಾನಸಭೆ ಕಲಾಪ ವೀಕ್ಷಣೆ



ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮದ ವಿದ್ಯಾರ್ಥಿಗಳು ವಿಧಾನಸೌಧದ ಮುಂದೆ ಫೋಟೋ ಕ್ಲಿಕ್ಕಿಸಿಕೊಂಡ ಕ್ಷಣ. ಅದಕ್ಕೂ ಮುಚ್ಚೆ ಅವರು ವಿಧಾನಸಭೆಯ ಕಲಾಪವನ್ನು ವೀಕ್ಷಿಸಿದರು.

**ಲಾವಣ್ಯ ಕೆ. ಎಸ್**

ವಿಧಾನಸೌಧ ವೀಕ್ಷಣೆಗಾಗಿ ಅಧ್ಯಾಪಕರೊಡನೆ ಪ್ರಥಮ ಮತ್ತು ದ್ವಿತೀಯ ವರ್ಷದ ಪತ್ರಿಕೋದ್ಯಮ ವಿದ್ಯಾರ್ಥಿಗಳು ತೆರಳಿದ್ದರು. ವಿಧಾನಸಭೆ ಅಧಿವೇಶನದ ವೀಕ್ಷಣೆಗೆ ಮೊದಲೇ ಪಾಸ್‌ಗಳನ್ನು ಪಡೆದುಕೊಳ್ಳಬೇಕಾಗುತ್ತದೆ. ನಮ್ಮ ಅಧ್ಯಾಪಕರೊಬ್ಬರ ನೆರವಿನಿಂದ ವಿಭಾಗದ ಮುಖ್ಯಸ್ಥರು ಇದಕ್ಕೆ ಅಗತ್ಯ ಏರ್ಪಾಡು ಮಾಡಿದ್ದರು. ಒಟ್ಟು 16 ವಿದ್ಯಾರ್ಥಿಗಳು ಹಾಗೂ ಐವರು ಅಧ್ಯಾಪಕರು ಸೆಂಟ್ರಲ್ ಕಾಲೇಜಿನಿಂದ ಕಾಲ್ನಡಿಗೆಯ ಮೂಲಕವೇ ನಿಗದಿಯಾದ ದಿನದಂದು ವಿಧಾನಸೌಧವನ್ನು ತಲುಪಿದರು. ಪ್ರವೇಶದ್ವಾರದಲ್ಲಿದ್ದ ಅಧಿಕಾರಿಗಳು ವಿದ್ಯಾರ್ಥಿಗಳನ್ನು ಒಳಗೆ ಬಿಡುವ ಮುನ್ನ ಪಾಸುಗಳನ್ನು ಪರಿಶೀಲಿಸಿದರು. ನಮಗೆ ಮೂರು ರೀತಿಯ ಪಾಸ್‌ಗಳು ದೊರೆತಿದ್ದವು. ನೀಲಿ ಬಣ್ಣದ ಪಾಸ್, ಬಿಳಿ ಬಣ್ಣದ ಪಾಸ್ ಮತ್ತು ಪಿಂಕ್ ಬಣ್ಣದ ಪಾಸ್. .ಒಂದರಲ್ಲಿ ಐದು ಜನರು ಪ್ರವೇಶಿಸಲು ಅವಕಾಶವಿರುತ್ತದೆ. ನನಗೆ ದೊರೆತಂತಹ ಪಾಸ್ ನೀಲಿ ಬಣ್ಣದ ಪಾಸ್‌ನಲ್ಲಿ ನಾನು ಮತ್ತು ನಾಲ್ವರು ಸಹಪಾಠಿಗಳು ಒಳಗೆ ಪ್ರವೇಶಿಸಿದೆವು. ನಂತರ ಮತ್ತೊಮ್ಮೆ ಒಳಗೆ ಎಲ್ಲರನ್ನೂ ತಪಾಸಣೆಗೊಳಪಡಿಸಿ ಆಧಾರ್ ಕಾರ್ಡ್ ಪ್ರತಿಗಳನ್ನು ಪರಿಶೀಲಿಸಲಾಯಿತು. ಅಲ್ಲಿನ ಅಧಿಕಾರಿಗಳು ನಾವು ತೆಗೆದುಕೊಂಡು ಹೋಗಿದ್ದ ಬ್ಯಾಗ್, ಮೊಬೈಲ್ ಎಲ್ಲವನ್ನೂ ವಶಕ್ಕೆ ತೆಗೆದುಕೊಂಡರು. ಕಪ್ಪು ಬಣ್ಣದ ಉಡುಪು ಧರಿಸುವುದನ್ನು ನಿಷೇಧಿಸಲಾಗಿ–ತ್ತು. ಅಲ್ಲಿಂದ ಸ್ವಲ್ಪ ಮುಂದೆ ಸಾಗಿದಾಗ ಇನ್ನೊಂದು ಹಂತದ ಪರಿಶೀಲನೆ ನಡೆಸಲಾಯಿತು.ಅದು ಕೊನೆಯ ಹಂತವಾಗಿತ್ತು. ಅಲ್ಲಿದ್ದ ಪೊಲೀಸ್ ಅಧಿಕಾರಿಯು ಎಲ್ಲಾ ವಿದ್ಯಾರ್ಥಿಗಳನ್ನು ಸ್ವಾಗತಿಸಿ ಹಸನ್ಮುಖಿಯಾಗಿ ಮಾತನಾಡಿಸುತ್ತಿದ್ದರು. ಅಂತಿಮವಾಗಿ ಅಧಿವೇಶನ ನಡೆಯುತ್ತಿದ್ದ ಸದನದ ಬಾಗಿಲನ್ನು ತಲುಪಿದೆವು. ಕೆಲವೇ ನಿಮಿಷಗಳ ನಂತರ ನಮ್ಮನ್ನು ಒಳಗೆ ಕರೆದೊಯ್ದು ಸಭಾಧ್ಯಕ್ಷರ ಗ್ಯಾಲರಿಯ ಕುರ್ಚಿಗಳಲ್ಲಿ ಆಸೀನರಾಗಲು ಸೂಚಿಸಿದರು. ಅಲ್ಲಿ ಕೆಲವು ಕಟ್ಟುನಿಟ್ಟಿನ ಶಿಸ್ತಿನ ಕ್ರಮಗಳನ್ನು ಅನುಸರಿಸಬೇಕಾತ್ತು. ಹಾಗೆಯೇ ಸದನದ ಕಲಾಪಗಳ ಕುರಿತು ವಿವರಿಸುವುದಾದರೆ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅದ್ಯಕ್ಷ ಪೀಠವನ್ನು ಅಲಂಕರಿಸಿದ್ದರು. ಹಲವಾರು ಸಚಿವರೂ ಸದನದಲ್ಲಿ ಉಪಸ್ಥಿತರಿದ್ದರು. ಆಡಳಿತ ಮತ್ತು ಪ್ರತಿಪಕ್ಷಗಳ ಸದಸ್ಯರು ಸಾಕಷ್ಟು ಸಂಖ್ಯೆಯಲ್ಲಿ ಹಾಜರಿದ್ದರು.. ಮೊದಲಿಗೆ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಬಜೆಟ್ ಮಂಡನೆ ಭಾಷಣವನ್ನು ಆರಂಭಿಸಿದರು. ಬಜೆಟ್ ಮಂಡನೆಯಲ್ಲಿನ ಸರಿ ತಪ್ಪುಗಳನ್ನು ಕುರಿತು ಕೆಲವು ಸದಸ್ಯರು ಪ್ರಶ್ನೆಗಳನ್ನು ಕೇಳಿದ್ದರಿಂದ ಸದನದಲ್ಲಿ ಗದ್ದಲದ ವಾತಾವರಣ ಉಂಟಾಯಿತು. ಅಂದು ಸಚಿವ ಡಾ.ಸುಧಾಕರ್ ಎಲ್ಲಾ

ಮುಂದುವರೆದಿದೆ-P3



ವಿದ್ಯಾರ್ಥಿಯೊಬ್ಬರು ಆಜಾದಿ ಕಾ ಅಮೃತ ಮಹೋತ್ಸವದ ಸ್ಪರ್ಧೆಯಲ್ಲಿ ಚಿತ್ರ ಬಿಡಿಸುತ್ತಿರುವುದು. ಸ್ಪರ್ಧೆಗಳು ಬೆಂಗಳೂರು ನಗರ ವಿಶ್ವ ವಿದ್ಯಾಲಯದಲ್ಲಿ ನಡೆದವು. ನರಸಿಂಹ ಮೂರ್ತಿ

# ಆಜಾದಿ ಕಾ ಅಮೃತ ಮಹೋತ್ಸವದ ಸಾಂಸ್ಕೃತಿಕ ಸ್ಪರ್ಧೆಗಳ ಕಲರವ

**ನಂದಿನಿ. ಎ**

ವಿಶ್ವವಿದ್ಯಾಲಯದಲ್ಲಿ ಹಬ್ಬದ ವಾತಾವರಣ ರೀತಿಯಲ್ಲಿ ಕಂಡು ಬಂದಿತ್ತು. ಎಲ್ಲಿ ನೋಡಿದರೂ ವಿದ್ಯಾರ್ಥಿಗಳು ರಚಿಸಿದ ಚಿತ್ರಕಲೆ ಭಿತ್ತಿಚಿತ್ರಗಳು ಹಾಗೂ ಭಾಷಣಗಳ ಸದ್ದು ಕ್ಯಾಂಪಸ್‌ನಲ್ಲಿ ಸಡಗರ ಸಂಭ್ರಮ ಮೇಳೈಸಿತ್ತು. ಹತ್ತು ಹಲವು ರೀತಿಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳ ಉತ್ಸಾಹ ಮತ್ತು ಪಿಸುಮಾತುಗಳು ಒಂದು ರೀತಿಯ ಜಾತ್ರೆಯ ಸನ್ನಿವೇಶವನ್ನು ಸೃಷ್ಟಿಸಿತ್ತು. ವಿಶ್ವವಿದ್ಯಾಲಯದ ಎಲ್ಲ ವಿಭಾಗಗಳ ವಿದ್ಯಾರ್ಥಿಗಳು ತಮಗಿಷ್ಟವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು. ಇದಕ್ಕೆ ಸಂಬಂಧಿಸಿದ ಎಲ್ಲಾ ಕರ್ತವ್ಯಗಳನ್ನು ವಿದ್ಯಾರ್ಥಿಗಳೇ ನಿರ್ವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಚರ್ಚಾ ಸ್ಪರ್ಧೆ, ಪ್ರಬಂಧ, ಚಿತ್ರಕಲೆ, ಪೋಸ್ಟರ್ ತಯಾರಿಕೆ ಇತ್ಯಾದಿ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಚರ್ಚಾ ಸ್ಪರ್ಧೆಯನ್ನು ಸಿವಿ ರಾಮನ್ ಹಾಲ್ ಮತ್ತು ಅರ್ಥಶಾಸ್ತ್ರ ವಿಭಾಗದಲ್ಲಿ ಹಮ್ಮಿಕೊಳ್ಳಲಾಗಿತ್ತು. "ಸ್ವಚ್ಛ ಭಾರತ್ ಕಾರ್ಯಕ್ರಮದಿಂದ ಪರಿಸರದಲ್ಲಿ ಬದಲಾವಣೆ ಇದೆಯೇ"ಎಂಬುದು ಬಗ್ಗೆ ಚರ್ಚಾ ಸ್ಪರ್ಧೆಯ ವಿಷಯವಾಗಿದ್ದು ಪರ ಮತ್ತು ವಿರೋಧ ವಾದಗಳನ್ನು ಮಂಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಇಂಗ್ಲೀಷ್ ಮತ್ತು ಕನ್ನಡ ಭಾಷೆಯಲ್ಲಿ ಮಾತನಾಡಬಹುದೆಂದು ತಿಳಿಸಲಾಗಿತ್ತು. ಅನೇಕ ವಿದ್ಯಾರ್ಥಿಗಳು ಪರವಾಗಿ ಮಾತನಾಡಿದ್ದರು ಅನೇಕ ಸ್ಪರ್ಧಾಳುಗಳು ಸ್ವಚ್ಛ ಭಾರತ ಪರಿಕಲ್ಪನೆ ಹುಟ್ಟಿದ ಬಗ್ಗೆ ಹೆಚ್ಚು ಹೊತ್ತು ಕೊಟ್ಟು ಮಾತನಾಡಿದ್ದರು. ಇತಿಹಾಸದ ವಿದ್ಯಾರ್ಥಿಯೊಬ್ಬರು ಅಂಕಿ ಅಂಶಗಳ ಕಾರ್ಯಕ್ರಮದಲ್ಲಿ ಗಂಗಾ ಕ್ಲಿನಿಕ್ ಯೋಜನೆ** ಮತ್ತು ನಮಗೆ ಕ್ಯಾನ್ಸರ್ ಬಂದಾಗ ಅದರ ಚಿಕಿತ್ಸೆ ಬಗ್ಗೆ ಹೇಗೆ ನಾವು ನೋಡಿಕೊಳ್ಳುತ್ತೇವೆಯೋ ಅದೇ ರೀತಿ ನಮ್ಮ ಸುತ್ತಮುತ್ತಲಿನ ಪರಿಸರವನ್ನು ನೋಡಿಕೊಳ್ಳಬೇಕೆಂದು ಪ್ರತಿಪಾದಿಸಿದರು. ಭೌತಶಾಸ್ತ್ರ ವಿಭಾಗದ ವಿದ್ಯಾರ್ಥಿ ಸ್ವಚ್ಛತೆ ಕಾಪಾಡಬೇಕು ಅದನ್ನು ಸ್ವಾತಂತ್ರ್ಯ ಸಂಗ್ರಾಮದ ಗಾಂಧೀಜಿಯವರ ನಡೆಯುವ ರೀತಿ ಇತ್ತು ದತ್ತಾಂಶಗಳನ್ನು ಹೋಲಿಕೆ ಮಾಡಬೇಕೆ ಹೊಂದಿದ ದೇಶ, ಅಭಿವೃದ್ಧಿ ಹೊಂದಿದ ರಾಜ್ಯ ,ಹರಿಯಾಣ ರಾಜ್ಯ, ಗುರು ಗ್ರಾಮಕ್ಕೆ ಮೊದಲ ಸ್ಥಾನ ನೀಡಿದ ಬಗ್ಗೆ ಮತ್ತು ಅರವತ್ತು ಸಾವಿರ ಟನ್ ಕಲ್ಲಿದ್ದಲು ವಿದ್ಯುತ್ ಉಪಯೋಗಿಸುತ್ತಾರೆ ಎಂದು ತಿಳಿಸಿದರು *** ವಾಣಿಜ್ಯ ವಿಭಾಗದ ವಿದ್ಯಾರ್ಥಿಯು ಪ್ರತಿಯೊಬ್ಬರೂ ತಮ್ಮ ಮನೆಯ ಮುಂದೆ ಗಿಡ ನೆಡುವ ಬಗ್ಗೆ ಮತ್ತು ಪರಿಸರ ರಕ್ಷಣೆಯಲ್ಲಿ ಸಾರ್ವಜನಿಕರ ಜವಾಬ್ದಾರಿ ಹಾಗೂ ಕೋವಿಡ್‌ನಿಂದಾದ ಸಮಸ್ಯೆಯನ್ನು ವಿವರಿಸಿದರು. ಪ್ರಬಂಧ ಸ್ಪರ್ಧೆಯನ್ನು ಕನ್ನಡ ವಿಭಾಗದ ಆವರಣದೊಳಗೆ ಆಯೋಜಿಸಲಾಗಿತ್ತು ಪೋಸ್ಟರ್ ತಯಾರಿಕೆಯನ್ನು ವಿಶ್ವವಿದ್ಯಾಲಯದ ಹೊರಾಂಗಣದಲ್ಲಿಯೇ ಆಯೋಜಿಸಲಾಗಿತ್ತು. ಭಿತ್ತಿಚಿತ್ರಗಳನ್ನು ರಚಿಸುತ್ತಿದ್ದ ವಿದ್ಯಾರ್ಥಿಗಳಲ್ಲಿ ಅಪಾರ ಸಂತೋಷ ಎದ್ದುಕಾಣಿಸುತ್ತಿತ್ತು. ಪೋಸ್ಟರ್ ರಚನೆಯನ್ನು ನೋಡಲು ವಿದ್ಯಾರ್ಥಿಗಳು ಸುತ್ತುವರಿದಿದ್ದರು.

ಓರ್ವ ವಿದ್ಯಾರ್ಥಿ ಸ್ವಾತಂತ್ರ್ಯ ಸಂಗ್ರಾಮದ ಹಾಗೂ ಕೆಂಪುಕೋಟೆ ಮುಂತಾದ ಚಿತ್ರಗಳನ್ನು ಬಿಡಿಸುತ್ತಿರುವುದು ಕಂಡುಬಂದಿತ್ತು. ಚಿತ್ರಕಲೆ ಸ್ಪರ್ಧೆಯನ್ನು ಸಮಾಜ ಕಾರ್ಯ ವಿಭಾಗದಲ್ಲಿ ಏರ್ಪಡಿಸಲಾಗಿ–ತ್ತು ಈ ಕಾರ್ಯಕ್ರಮದಲ್ಲಿ ಪತ್ರಿಕೋದ್ಯಮದ ವಿದ್ಯಾರ್ಥಿಗಳೇ ಅತಿ ಹೆಚ್ಚು ಕಾಣಿಸಿದ್ದರು. ಚಿತ್ರಕಲೆ ಬಿಡಿಸುತ್ತಿರುವಾಗ ಕೊಂಚ ಗಡಿಬಿಡಿಯ ವಾತಾವರಣ ಕಂಡುಬಂದಿತ್ತು. ಇಲ್ಲಿ ಸಮಯಕ್ಕೆ ಸರಿಯಾಗಿ ಹಾಜರಾಗಬೇಕಿತ್ತು ಆದರೆ ಪತ್ರಿಕೋದ್ಯಮದ ವಿದ್ಯಾರ್ಥಿಗಳು ಸ್ಪರ್ಧೆಗೆ ಅಗತ್ಯವಾದ ಯಾವುದೇ ಪರಿಕರ ತಂದಿರಲಿಲ್ಲವಾದ್ದ–ರಿಂದ ಅವರಲ್ಲಿ ಆತಂಕ ಮನೆಮಾಡಿತ್ತು.

# ಸರ್ಕಾರಿ ಕಲಾ ಕಾಲೇಜಿನಲ್ಲಿ ಸಾಂಸ್ಕೃತಿಕ ಹಬ್ಬದ ಸಡಗರ

**ರೂಪ ಎಂ**



ಹಂಸಲೇಖ

ಬೆಂಗಳೂರಿನ ಅಂಬೇಡ್ಕರ್ ವೀದಿಯಲ್ಲಿರುವ ಸರ್ಕಾರಿ ಕಲಾ ಕಾಲೇಜಿನಲ್ಲಿ ಇತ್ತೀಚೆಗೆ 2021–22ನೇ ಸಾಲಿನ ಶೈಕ್ಷಣಿಕ, ಕಲಾ, ಸಾಂಸ್ಕೃತಿಕ, ಕ್ರೀಡೆ, ಕನ್ನಡ ಸಂಘ, ಎನ್.ಎಸ್.ಎಸ್, ಎನ್.ಸಿ.ಸಿ, ರೇಂಜರ್ಸ್, ರೋವರ್ಸ್ ಹಾಗೂ ಇತರೆ ಚಟುವಟಿಕೆಗಳ ವಾರ್ಷಿಕ ಸಮಾರಂಭ ಅದ್ದೂರಿಯಾಗಿ ನೆರವೇರಿತು. ಕಾಲೇಜಿನಲ್ಲಿ ಹಬ್ಬದ ವಾತಾವರಣ ಕಂಡುಬಂದಿತು. ತಳಿರು ತೋರಣ ಹಾಗೂ ಹಳದಿ–ಕೆಂಪು ಬಣ್ಣದ ಕನ್ನಡ ಬಾವುಟಗಳಿಂದ ಕಾಲೇಜಿನ ಆವರಣವನ್ನು ಅಲಂಕರಿಸಲಾಗಿತ್ತು. ವಿದ್ಯಾರ್ಥಿಗಳು ಆಕರ್ಷಕ ಉಡುಪುಗಳನ್ನು ಧರಿಸಿ ಕಂಗೊಳಿಸುತ್ತಿದ್ದರು. ಮುಖ್ಯ ಅತಿಥಿಗಳನ್ನು ಬಾಪೂಜಿ ಸಭಾಂಗಣಕ್ಕೆ ಡೊಳ್ಳು ಕುಣಿತದ ಮೂಲಕ ಸ್ವಾಗತಿಸಿ ಕರೆತರಲಾಯಿತು. ವಿಧಾನ ಪರಿಷತ್ ಸದಸ್ಯರು–ಮಾಜಿ ಉಪಸಭಾಪತಿ ಶ್ರೀ ಪುಟ್ಟಣ್ಣ, ಖ್ಯಾತ ಸಂಗೀತ ನಿರ್ದೇಶಕರಾದ ಡಾ. ಹಂಸಲೇಖ ಹಾಗೂ ಪದ್ಮಶ್ರೀ ಪ್ರಶಸ್ತಿ, ಅರ್ಜುನ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಲಂಡನ್ ಪ್ಯಾರಾ ಒಲಂಪಿಕ್ಸ್ ವಿಜೇತರಾದ ಶ್ರೀ ಎಚ್.ಎನ್. ಗಿರೀಶ್ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಕಾಲೇಜಿನ ಪ್ರಾಂಶುಪಾಲರಾದ ಡಾ. ಪಿ.ಜೆ. ಶ್ರೀನಿವಾಸ ನಾಯಕ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. 'ಹಚ್ಚೇವು ಕನ್ನಡದ ದೀಪ' ಹಾಡಿನ ಮೂಲಕ ಸಮಾರಂಭಕ್ಕೆ ಚಾಲನೆ ನೀಡಲಾಯಿತು. ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷರು ಹಾಗೂ ಶಾಸಕರಾದ ಶ್ರೀ ರಿಜ್ವಾನ್ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾದ ಹಂಸಲೇಖರವರು ಸ್ವತಃ ಹಾಡೊಂದನ್ನು ಹಾಡಿದ ನಂತರ ತಮ್ಮ ಭಾಷಣವನ್ನು ಪ್ರಾರಂಭಿಸಿದರು. ಸಂಗೀತ, ನೃತ್ಯಕಲೆ ಹಾಗೂ ಜಾನಪದ ಸಂಸ್ಕೃತಿಯ ಮಹತ್ವವನ್ನು ಅವರು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿದರು. ಕ್ರೀಡಾಪಟು ಗಿರೀಶ್‌ರವರು ಮಾತನಾಡಿ ತಾವು ಕ್ರೀಡಾ ಪಟುವಾಗಿ ಬೆಳೆದು ಬಂದ ದಾರಿ ಮತ್ತು ತಮ್ಮ ಜೀವನದ ಸಾಧನೆಯನ್ನು ವಿವರಿಸಿದರು. ಯುವಪೀಳಿಗೆಗೆ ಕ್ರೀಡೆಯ ಮಹತ್ವದ ಕುರಿತು ಅರಿವು ಮೂಡಿಸಿದರು. ಗಿರೀಶ್‌ರವರ ಸಾಧನೆಯು ಯುವಕರಿಗೆ ಸ್ಫೂರ್ತಿದಾಯಕವಾಗಲೆಂಬ ಸದುದ್ದೇಶದಿಂದ ಕೇಂದ್ರ ಸರ್ಕಾರವು ಸಿ.ಬಿ.ಎಸ್.ಇ ಪಠ್ಯ ಪುಸ್ತಕದಲ್ಲಿ ಪಾಠವನ್ನು ಅಳವಡಿಸಿರುವುದನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ. ಇದೇ ಕಾಲೇಜಿನ ವಿದ್ಯಾರ್ಥಿಯಾಗಿದ್ದ ಶ್ರೀ ಪುಟ್ಟಣ್ಣನವರು ಮಾತನಾಡಿ ತಮ್ಮ ಕಾಲೇಜು ದಿನಗಳ ಸವಿನೆನಪುಗಳನ್ನು ವಿದ್ಯಾರ್ಥಿಗಳೊಂದಿಗೆ ಹಂಚಿಕೊಂಡರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶ್ರೀ ರಿಜ್ವಾನ್ ಅರ್ಷದ್‌ರವರು ಸರ್ಕಾರಿ ಕಲಾ ಕಾಲೇಜಿನ ಸ್ಥಾಪನೆ ಹಾಗೂ ಬೆಳವಣಿಗೆಯ ಜೊತೆಗೆ ಇಲ್ಲಿ ವ್ಯಾಸಂಗ ಮಾಡಿದ ಸಾಧಕರ ಬಗ್ಗೆ ತಿಳಿಸಿದರು. ನೃತ್ಯ, ಭರತನಾಟ್ಯ, ಭಕ್ತಿಗೀತೆ, ಜಾನಪದ ಗೀತೆ, ದೇಶಭಕ್ತಿ ಗೀತೆ, ಭಾವಗೀತೆಗಳನ್ನು ವಿದ್ಯಾರ್ಥಿಗಳು ವಿಶೇಷ ಮೆರುಗು ನೀಡಿದರು. ವಿಜೇತರಿಗೆ ಬಹುಮಾನಗಳನ್ನು ವಿತರಿಸಿದ ಬಳಿಕ ವಂದನಾರ್ಪಣೆಯೊಂದಿಗೆ ಈ ಕಾರ್ಯಕ್ರಮ ಮುಕ್ತಾಯಗೊಂಡಿತು.

## ವಿದ್ಯಾರ್ಥಿಗಳಿಂದ ವಿಧಾನಸಭೆ ಕಲಾಪ ವೀಕ್ಷಣೆ

P2 ದಿಂದ

ಶಾಸಕರಿಗೆ ಔತಣಕೂಟವನ್ನು ಏರ್ಪಡಿಸಿದ್ದರು. ಸಭಾಧ್ಯಕ್ಷರು ಭೋಜನ ವಿರಾಮಾಕ್ಕಾಗಿ ಕಲಾಪವನ್ನು ಮುಂದೂಡಿದರು. ನಂತರ ನಾವೆಲ್ಲರೂ ಔತಣಕೂಟ ಏರ್ಪಡಿಸಲಾಗಿದ್ದ ಬ್ಯಾಂಕ್ವೆಟ್ ಹಾಲ್ ಬಳಿಗೆ ಬಂದೆವು. ಬಣ್ಣ ಬಣ್ಣದ ಹೂಕುಂಡಗಳಿಂದ ಸಭಾಂಗಣವನ್ನು ಅಲಂಕರಿಸಲಾಗಿತ್ತು.

ಅಲ್ಲಿಗೆ ಆಗಮಿಸಿದ ಮುಖ್ಯಮಂತ್ರಿಯವರ ಬಳಿಗೆ ಧಾವಿಸಿ ನಾವೆಲ್ಲರೂ ಅವರೊಂದಿಗೆ ಫೋಟೋ ಕ್ಲಿಕ್ಕಿಸುವ ಅವಕಾಶ ಗಿಟ್ಟಿಸಿಕೊಂಡೆವು. ನಂತರ ನಮ್ಮಲ್ಲಿ ಕೆಲವರು ಮಧು ಬಂಗಾರಪ್ಪನವರ ಜೊತೆ ಕೈಕುಲುಕಿ ಮಾತನಾಡಿಸಿದರು. ಅಧಿವೇಶನದ ವೀಕ್ಷಣೆಯಿಂದ ನಮಗೆ ವಿಧಾನಮಂಡಲದ ಕಾರ್ಯ ಕಲಾಪಗಳು ಹೇಗೆ ನಡೆಯುತ್ತವೆ ಎಂಬುದನ್ನು ಕಣ್ಣಾರೆ ನೋಡುವ ಸದವಕಾಶ ಲಭಿಸಿತು.

**ಅಪರೂಪದ ಅನುಭವ**

ಇದೊಂದು ಅಪರೂಪದ ಮತ್ತು ಮರೆಯಲಾಗದ ಅನುಭವವಾಗಿತ್ತು. ವಿಧಾನಸೌಧದ ಮುಂದಿನ ಮೆಟ್ಟಿಲುಗಳ ಮೇಲೆ ಸಾಲಾಗಿ ನಿಂತು ಗ್ರೂಪ್ ಫೋಟೋ ತೆಗೆಸಿಕೊಂಡೆವು. ಅದಾದ ಬಳಿಕ ನಾವೆಲ್ಲರೂ ಪ್ರೆಸ್ ಕ್ಲಬ್‌ಗೆ ಭೇಟಿ ನೀಡಿ ಉಪಹಾರದ ಜೊತೆಗೆ ಮಂಡಕ್ಕಿಯ ರುಚಿ ಸವಿದ್ದು ವಿಭಾಗಕ್ಕೆ ವಾಪಸಾದೆವು.

# ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ಕಲೆಯ ಸಮಾರಂಭ

ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ಜುಲೈ 29 ಶುಕ್ರವಾರದಂದು ಮುಖ್ಯವಾಗಿ ಆಜಾದಿ ಕಾ ಅಮೃತ್ ಮಹೋತ್ಸವದ ಅಂಗವಾಗಿ ವಿದ್ಯಾರ್ಥಿಗಳಿಗಾಗಿ ಹಲವಾರು ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ವಿವಿಧ ಕಾಲೇಜುಗಳ ಅನೇಕ ವಿದ್ಯಾರ್ಥಿಗಳು ಈ ಸ್ಪರ್ಧೆಗಳಲ್ಲಿ ಪಾಲ್ಗೊಂಡಿದ್ದರು. ಆ ಮೂಲಕ ವಿದ್ಯಾರ್ಥಿಗಳು ತಮ್ಮ ಪ್ರತಿಭೆಯನ್ನು ಒರೆಗೆ ಹಚ್ಚಿಕೊಂಡರು. 76ನೇ ಸ್ವತಂತ್ರ ದಿನದ ಅಂಗವಾಗಿ ಚಿತ್ರಕಲೆ, ಪ್ರಬಂಧ ಮತ್ತು ನೃತ್ಯ ಕಲಾ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಬೆಂಗಳೂರು ನಗರ ವಿಶ್ವವಿದ್ಯಾಲಯ ವ್ಯಾಪ್ತಿಯ ಸುಮಾರು 54 ಕಾಲೇಜುಗಳಿಂದ ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡಿದ್ದರು. ಈ ಸ್ಪರ್ಧೆಗಳಿಗೆ ಅಗತ್ಯವಾದ ಪರಿಕರಗಳನ್ನು ವಿದ್ಯಾರ್ಥಿಗಳು ತಾವೇ ತಂದಿದ್ದರು.

ಸ್ಪರ್ಧೆಗಳಲ್ಲಿ ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗೆ ಊಟೋಪಚಾರದ ಏರ್ಪಾಡು ಮಾಡಲಾಗಿತ್ತು. ಹಾಗೆಯೇ ಮುಖ್ಯವಾಗಿ ಕನ್ನಡ, ಎಂ.ಎಸ್.ಡಬ್ಲ್ಯೂ ವಿಭಾಗದ ವಿದ್ಯಾರ್ಥಿಗಳು ಮತ್ತು ಪ್ರಾಧ್ಯಾಪಕರು ಈ ಕಾರ್ಯಕ್ರಮದ ಜವಾಬ್ದಾರಿಯನ್ನು ನಿರ್ವಹಿಸಿದರು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರ ಪಟ್ಟಿ ಇಂತಿದೆ ಪ್ರಬಂಧ ಸ್ಪರ್ಧೆ: ಶುಚಿಕಾ ಡಿ ಬಿಳ್ಳಿಗೆರೆ, ರೂಪಿಣಿ ಆರ್ಯ, ಸಹನಾ ಎಂ,ಚರ್ಚಾ




ಸ್ಪರ್ಧೆ:ತೇಜಸ್ವಿನಿ ಎಂ.ಎಸ್, ಪ್ರವೀಣ್. ಜೆ, ಆರಾಧನಾ,ದೇಶ ಭಕ್ತಿ ಗೀತೆಗಳ ಸ್ಪರ್ಧೆ: ಶ್ರವ್ಯಾಜಿ, ಶರಧಿ ಎ.ಎಂ, ನಿಶಾ ಎ. ಎಸ್, ಕಿರುನಾಟಕಗಳ ಸ್ಪರ್ಧೆ: ಕಾರ್ತಿಕ್, ಅಭಿಷೇಕ್,ಅನನ್ಯಾಸಿ ಜೋನಿ,ಗೌತಮಿ ಗೊಂಡೆ,ಹರಿಪ್ರಸಾದ್, ಆಶಿಕಾ, ಜಯಪ್ರಕಾಶ್, ಸುಹಾಸ್, ಪ್ರತೀಕ್ಷಾ, ಧನುಶ್ರೀ, ಯಶಸ್ವಿನಿ, ಆಶಿಕಾ, ಸುಶ್ಮಿತಾ, ಹರ್ಷಿತ ಕೆ, ಸಂತೋಷ್.ಪೇಂಟಿಂಗ್ ಸ್ಪರ್ಧೆ: ನಿವೇದ್ಯ ಎಸ್, ಪ್ರೀತಿಶ್ರೀ.ಜಿ, ಪಲ್ಲವಿ ಎಂ ಸ್ವಾತಂತ್ರ್ಯ ಓಟ ಸ್ಪರ್ಧೆ,ಶೇಷು ಆರ್,ಆರಿಫ್,ತರುಣ್, ಕೆ.ಎಲ್, ಲಿಖಿತಾ ಎ, ದೇವಿಕಾ ದಿ.ಡಿ, ಮಧುಶ್ರೀ.



ಕೇಂದ್ರ ಚುನಾವಣೆ ಆಯೋಗವು ಬೆಂಗಳೂರಿನ ವಿಕಾಸ ಸೌಧದಲ್ಲಿ ಸೋಮವಾರ ಆಯೋಜಿಸಿದ್ದ ಚುನಾವಣಾ ಸುಧಾರಣಾ ಕ್ರಮಗಳ ಅನುಷ್ಠಾನಕ್ಕೆ ಚಾಲನೆ ನೀಡುವ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ನಗರದ ಸರ್ಕಾರಿ ಕಲಾ ಕಾಲೇಜಿನ ವಿದ್ಯಾರ್ಥಿಗಳು ಮತ ಚಲಾವಣೆಯ ಸಂಕೇತವುಳ್ಳ ಮಣ್ಣಿನ ಹೂದಾನಿಯನ್ನು ಪ್ರದರ್ಶಿಸಿ ಸಂಭ್ರಮಿಸಿದರು.

# Students to get more facilities at MCW

from page 1

institute and students. Among them are creating awareness about the college and the NEP based curriculum it follows, in PU colleges and by effectively using the online digital platforms for the promotion of the institute.

The college is functioning from a prime location and is housed on the campus of Karnataka Public School located on 6th main Malleshwaram. The area is the 'Educational Hub of Bengaluru'. It is a newly built 4 storied building which shares its campus with a primary school, a high school and the Pre University College. Karnataka is the first state in the country to implement NEP -2020 and MCW is the first ever college which runs completely as per the NEP based curriculum.

This new policy is student-centric and has been introduced to bring in changes in the field of education in India. For example, 'Multi entry and Multi exit' program, allows the students to take up their discontinued study from the year, they had left.

That is if a student has to discontinue his/her studies in between the course, he/she will get the credit for what he/she has already completed. After the completion of every year, students get the certificate as follows,

- 1st year – Certificate.
- 2nd year – Diploma.
- 3rd year – Degree.
- 4th year – Honors degree.

# Fitness parmount in sports: Vice Captain

**Prince Enosh. A**

The Bengaluru City University (BCU) men's hockey team has been doing well and bringing honours with its performance in various tournaments. BCU

Had a free-wheeling interview with team Vice- Captain PranamGowda, who is a full back and excels as back flicker. Twenty one-year-old Gowda is a final year B.Com student in Al-Ameen Arts, Science and Commerce College, which is affiliated to Bengaluru City University.




**Khelo India Hockey Championship winners with Bengaluru City University Vice Chancellor Lingaraja Gandhi.** By special arrangement

**BCU: Could you tell us about the recent achievements of the team?**

**PG:** We bagged gold inKhelo India University Games held in Bengaluru. We had done well last year and had won gold in Khelo India University Games held in Odisha. The team had clinched silverin All India Universities Gamesheld at Pune.



**Pranam Gowda YM with Khelo India medal.** By special arrangement

**BCU: What are your team's strengths and weaknesses?**

**PB:** we have a good team and have been doing consistently well in most of the tournaments. Our team's star players are (captain)Punith R,(goalkeeper) Sanjay T,(defender) Sukalyanmondal,Ansar Ali A M,Harish S Mutager,(forward) Vasantkumargovakvi,Pavan FM

**BCU: Which are the universities which are tough opponents to you?**

**PB:** I think Savitribai Phule Pune University, and Sambalpur University Odisha.Theyare very good teams and they play well.

**BCU: How do you prepare for tournaments?**

**PB:** We study and carefully watch the other teams and try to figure out their weaknesses. Accordingly, we work out our strategy and assign the roles to our players. We will never discuss the plans on the ground. However, we do change our tactics and plans depending on the situation and suggestions from the coach. We maintain our cool but play aggressively on the field. We have strong will power and stamina. Our only aim is to always play to win.

**BCU: Has coach contributed to the success of the team?**

**PB:**I am really grateful to our coach Vijay Krishna. He has played a major role in the success of the team. He is a great mentor and very helpful persons. He moulds players and cares for them. He is very particular about players' daily routine like diet and sleep. He keeps on eagle eye on players during practice sessions. His only aim is that players should deliver and do well in the tournaments.

**BCU: Give us a view of your daily sessions**

**PB:** We practice regularly for almost seven to eight ours. Usually, we have practice session from 6 AM to 9 AM and 4 PM to 8 PM. In between, we attend our classes. The practice sessions are used for improving skills and honing rough edges. In the practice sessions, we try various combinations and change of roles as they would be useful in tournaments.

**BCU: What diet and fitness regime you follow?**

**PB:** Fitness is paramount in any sports activities and hockey is no exception. You have to have stamina to play in tournaments. For that diet is important. A qualified nutritionist gives us the chart and we adhere to it. Generally breakfast is Dalia and egg and fruits, afternoon chapathi and some non-vegetarian food in the night. We cannot put on or lose weight.

Also, we need to take care to avoid injuries during practice sessions and try to play safe games.

**BCU: Tell us about yourself**

**PB:** I come from Belur in Hassan district and I took to hockey at the age of 10. I got good encouragement all along and now I am representing the state. my idol is former Indian player V R Raghunath. I have been getting good encouragement from Bengaluru City University. BCU VC Prof.Lingaraja Gandhi is also very supportive.

# Sai Pallavi steals the show

**Rashmitha**

Release Date: July-15-2022
Cast: SaiPallavi, KaaliVenkat, Aishwarya Lakshmi, Brahmanandam.
Director: Gowtham Ramachandran.
Producer: Thomas George, Aishwarya Lakshmi, Gowtham Ramachandran.
Music director: Govind Vasanth.
Editor :Shafiqe Mohamed Ali.

The trailer of Gargi was meant to woo the audience to cinema halls. It succeeds in capturing the imagination of audience. The movie is a female-centric and revolves around Sai Pallavi. The multi-lingual picture sees Sai Pallavi walking away with honours. She impresses audience with fantastic acting skills.

The film, which entertained the audience with its teaser and trailer, has finally released in theaters today i.e on July 15-july-2022 amid huge expectation. The film has been released in Telugu, Tamil and Kannada. This film is made as a suspense thriller, the film has been issued a U/A certificate by the Censor Board, Duration of the movie is two-hour, twenty-minutes In the movie, Gargi (Sai Pallavi) essays the role of a school teacher. Her fatherR S Shivaji(Brahmanandam) is a security guard in an apartment. One night, the father does not return home. Gargi goes in search of father only to learn that he has been arrested on the charges of raping a nine-year-old girl. But Gargi strongly believes that her father is innocent. She decides to wage a legal battle to prove that her father was not involved in the crime.




Then, story revolves around her trials and tribulations. The suspense is will Gargi succeed in her legal battle? That's the crux of the story. The movie highlights sexual exploitation the girls in society undergo. It delivers message that the predators are smart and leave very little evidence to be caught. Picturisation of trauma and shame the family of the accused undergo have been captured well. In the first 30 minutes, the director focuses on the Gargi family. Then, it takes interesting twists. The second half turns mostly emotional. Especially, the climax walks away with the cake though it is expected.

TECHNICAL ASPECTS: Gautham Ramachandran delivers a decent movie on women and the problems they face in society. Aishwarya does justice to her role. Narration lacks pace and fails to hold the audience to their seats. Cinematography by Sraiyanti and PremkrishnaAkkatu is good.

# A road which bookworms will never like to miss

from page 1

of the book might have changed over the years and some of them may have the smell but the content makes buyers to purchase them. Many sellers buy old books and resell them after booking profits.

Avenue Road is one of the few places known for its traditional used textbook trade. The categories vary from text books to novels, old editions of magazines and some niche publications. One is sure to find literary classics, literature, political books, Indian literature, academic books, fiction, fantasy and self-help books. The road is a treasure trove for those preparing for competitive examinations.

Students and others come to Avenue Road to buy and sell books and magazines.

"Avenue Road has at least 60 bookshops and around 250 street booksellers and they have been here for last 30 years," says Ramesh, Ramya Book House owner. Though the stores have lost their shoppers to e-market, booksellers say the variety of textbooks and wide scope for bargaining still attracts the customers.

"People from all over Bengaluru visit this place after hearing about the extraordinary collection" says Devansh Bansal, who recently opened his second store on Avenue Road.

"The street is a spot for bibliophiles and students. It has a collection ranging from used text books to guides and novels. The place has been my favourite since my school days," says Shalini Venkat, a Government Arts College student.

"The price of the book depends on your negotiating skills," says Samruddi, a resident from Bengaluru.

One can't forget to mention the booksellers when you talk about enthusiastic book readers. The booksellers are seen that they call anyone who passes by to take a good look at the pile of books. Though most of the book sellers are not well educated, their skills in identifying the books amaze most of the visitors. Their knowledge of books is sure to floor the buyers.

**Chief Editor:**
**Prof N Narasimhamurthy,**
Head of the Department, Mass Communication and Journalism.

**Faculty Editor:**
R Mohan Babu

**Student Editors:**
Narasimha Murthy. T. A
Prince Enosh. A

**Printer and Publisher:** The Chairman, Department of Mass Communication and Journalism, P.K.Block, Palace Road, Bengaluru-56009, Karnataka.